೨) ೧೯೮೭-೮೮ನೇ ಸಾಲಿನಲ್ಲಿ ೧೦.೮೧ ಟನ್‌ಗಳು ಉಣ್ಣೆ ಕೊಳ್ಳಲಾಗಿದೆ. ರೂ. ೧,೨೫,೫೮೫ ರಷ್ಟು ಮೌಲ್ಯದ ಉಣ್ಣೆ ಮತ್ತು ರೂ. ೫೮,೦೧೬-೭೫ ರಷ್ಟು ಮೌಲ್ಯದ ಉಣ್ಣೆ ವಸ್ತುಗಳ ಮಾರಾಟ ಮಾಡಲಾಗಿದೆ.

೩) ಇತ್ತೀಚೆಗೆ ಮಂಡಳಿಯ ಅಧೀನದ ಎರಡು ಪ್ರಾರಂಗಳಲ್ಲಿ ತಳಿ ಅಭಿವೃದ್ಧಿಗಾಗಿ ಅಮೇರಿಕಾ ಸಂಯುಕ್ತ ಸಂಸ್ಥಾನದಿಂದ ೯ ರ್ಯಾಂಬುಲ್ ತಳಿಯ ಟಗರುಗಳನ್ನು ಆಮದು ಮಾಡಿಕೊಳ್ಳಲಾಗಿದೆ. ಇದಲ್ಲದೆ ಪ್ರಗತಿಪರ ರೈತರಿಬ್ಬರಿಗೆ ತಲಾ ಒಂದು ರ್ಯಾಂಬುಲ್ ಟಗರನ್ನು ತಳಿ ಅಭಿವೃದ್ಧಿಗಾಗಿ ನೀಡಲಾಗಿದೆ.

೪) ಧಾರವಾಡ ಜಿಲ್ಲೆಯಲ್ಲಿ ಐರಣಿ, ರಾಣಿಬೆನ್ನೂರು ಹಾಗೂ ಕೋಲಾರ ಜಿಲ್ಲೆಯ ಬಡಮಾಕನ ಹಳ್ಳಿಯಲ್ಲಿ ಹಂಜಿ ಯಂತ್ರ ಸ್ಥಾಪಿಸಿ ನೇಕಾರರಿಗೆ ಹಂಜಿ ಮಾಡುವ ಸೌಲಭ್ಯ ನೀಡಲಾಗುತ್ತಿದೆ.

ಉದ್ದೇಶಿತ ಅಭಿವೃದ್ಧಿ ಕಾರ್ಯಕ್ರಮಗಳು

೧ ಮಂಡಳಿಯನ್ನು ನಿಗಮವನ್ನಾಗಿ ಪರಿವರ್ತಿಸಲು ಪರಿಶೀಲಿಸಲಾಗುತ್ತಿದೆ.

೨ ವಿಶ್ವ ಬ್ಯಾಂಕ್ ನೆರವಿನ ಯೋಜನೆ, ಅನುಷ್ಠಾನವಾದಲ್ಲಿ ಮಂಡಳಿಯು ಸಮಗ್ರವಾಗಿ ಹಾಗೂ ಹೆಚ್ಚು ವ್ಯಾಪಕವಾಗಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳಲು ಅನುವಾಗಲಿದೆ.

೩ ಕೋಲಾರದಲ್ಲಿ ಸಣ್ಣ ಕೈಗಾರಿಕೆ ಅಭಿವೃದ್ಧಿ ನಿಗಮದಿಂದ ಕೈಗಾರಿಕೆ ಷೆಡ್ ಒಂದನ್ನು ಕೊಂಡಿದ್ದು, ಇಲ್ಲಿ ಸದ್ಯದಲ್ಲಿ ಉಣ್ಣೆ ಹಂಜಿ ಮಾಡಿ ಮುಂದೆ ಉಣ್ಣೆ ಸಂಸ್ಕರಣಾ ಹಾಗೂ ಉಣ್ಣೆ ವಸ್ತ್ರಗಳ ಉತ್ಪಾದನೆ ಕಾರ್ಯಕ್ರಮಗಳನ್ನು ಆರಂಭಿಸಲಾಗುವುದು. ಇದರಿಂದ ಕನಿಷ್ಠ ೨೫ ಮಂದಿ ವೃತ್ತಿ ಪರರಿಗೆ ಉದ್ಯೋಗ ಅವಕಾಶ ಕಲ್ಪಿಸಲಾಗುವುದು.

೪ ರಾಣಿಬೆನ್ನೂರಿನಲ್ಲಿ ಸಾಮೂಹಿಕ ನೂಲುವ ಮತ್ತು ನೇಯುವ ಕೇಂದ್ರದ ಕಟ್ಟಡವೊಂದು ನಿರ್ಮಾಣವಾಗುತ್ತಿದ್ದು ಇಲ್ಲಿ ನೇಕಾರರಿಗೆ ಹಾಗೂ ನೂಲುವವರಿಗೆ ತುಂಡು ಕೆಲಸದ ಆಧಾರದ ಮೇಲೆ ಉಣ್ಣೆ ವಸ್ತ್ರಗಳ ತಯಾರಿಕೆ ಹಾಗೂ ಉಣ್ಣೆದಾರ ತಯಾರಿಕೆಯಲ್ಲಿ ಉದ್ಯೋಗಾವಕಾಶ ಕಲ್ಪಿಸಲಾಗುವುದು.

ಉದ್ಯೋಗಸ್ಥ ಮಹಿಳೆಯರ ವಸತಿ ಗೃಹ

೪೦೩೬ ಶ್ರೀ ಬಿ. ಎ. ಉಮರಬ್ಬ (ವಿಟ್ಲ).— ಮಾನ್ಯ ಸಮಾಜ ಕಲ್ಯಾಣ, ಯುವಜನ ಸೇವಾ ಮತ್ತು ಕ್ರೀಡಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

೮) ಬೆಂಗಳೂರಿನಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ಆರಂಭಿಸಿದ ಉದ್ಯೋಗಸ್ಥ ಮಹಿಳೆಯರ ವಸತಿ ಗೃಹಗಳೆಷ್ಟು?

೯) ಇತ್ತೀಚೆಗೆ ಮಳೆ ಹಾನಿಗೀಡಾಗಿ ತೊಂದರೆ ಅನುಭವಿಸಿದ ಉದ್ಯೋಗಸ್ಥೆ ಮಹಿಳೆಯರಿಗೆ ಈ ಮೇಲಿನ ವಸತಿ ಗೃಹಗಳಲ್ಲಿ ಉಳಿಯಲು ಅವಕಾಶ ಮಾಡಿಕೊಡಲಾಗಿದೆಯೇ?

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಮಾಜ ಕಲ್ಯಾಣ, ಯುವಜನ ಸೇವಾ ಮತ್ತು ಕ್ರೀಡಾ ಮಂತ್ರಿಗಳು).—

೮) ೧೪

೯) ಎಂ.ಟಿ.ಬಿ. ರಸ್ತೆಯಲ್ಲಿರುವ ಉದ್ಯೋಗಸ್ಥೆಯರ ಮಹಿಳೆಯರ ವಸತಿ ಗೃಹವು ನೀರಿನಿಂದ ತುಂಬಿದ್ದರಿಂದ ವಸತಿದಾರರಿಗೆ ಸುರಕ್ಷತೆ ದೃಷ್ಟಿಯಿಂದ ಬೇರೆ ಕಡೆ ವ್ಯವಸ್ಥೆ ಮಾಡಿದ್ದರೂ ಅವರು ಈ ವ್ಯವಸ್ಥೆಯನ್ನು ನಿರಾಕರಿಸಿ ಅದೇ ಕಟ್ಟಡದಲ್ಲಿ ಇರುತ್ತಾರೆ.